**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಸಿ.ಸಿ. ನಂ. 25/2025**

| | | |
|---|---|---|
| ಪಿರ್ಯಾದಿ | : | ಸರಕಾರದ ಪರವಾಗಿ<br>ಪೋಲಿಸ್ ನಿರೀಕ್ಷಕರು,<br>ಹೊನ್ನಾವರ ಪೊಲೀಸ್ ಠಾಣೆ (ಉ.ಕ) |
| | | **–ವಿರುದ್ಧ –** |
| ಆರೋಪಿ | : | ಮಹಮ್ಮದ ಸಾದಿಕ ತಂದೆ ಅಪ್ಜಲ್ ಖಾನ್,<br>ವಯಸ್ಸುಃ 35 ವರ್ಷಗಳು,<br>ಉದ್ಯೋಗಃ ಆಟೋ ಚಾಲಕ,<br>ಸಾಕೀನಃ ಕೃಷ್ಣಕೇರಿ, ನಗರಬಸ್ತಿಕೇರಿ,<br>ಸರಳಗಿ, ತಾಲೂಕುಃ ಹೊನ್ನಾವರ. |

**ಅಪರಾಧಿಕ ಪ್ರಕ್ರಿಯಾ ಸಂಹಿತೆಯ ಕಲಂ 313 ಅಡಿಯಲ್ಲಿ ದಾಖಲು ಮಾಡಿಕೊಂಡ ಆರೋಪಿಯ ಹೇಳಿಕೆ**

ಪ್ರಶ್ನೆ.1: ನೀವು ಅಭಿಯೋಜಕರ ಪರ ಸಾಕ್ಷಿದಾರರ ಸಾಕ್ಷಿ ಹೇಳಿಕೆಯನ್ನು ಕೇಳಿದ್ದೀರಾ?

ಉತ್ತರಃ

ಪ್ರಶ್ನೆ.2: ಫ್ರಾಸಾ-1 ಅಫ್ರಿನಾಜ್ ಹಕೀಮ್ ಖಾನ್ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 28-12-2024 ರಂದು ತಾನು ಸರಳಗಿಯಿಂದ ಉಪ್ಪೋಣಿಗೆ ತನ್ನ 3 ವರ್ಷದ ಮಗುವಿನೊಂದಿಗೆ ಹೋಗಿ ಪುನಃ ಒಂದು ಆಟೋದಲ್ಲಿ ವಾಪಸ್ಸು ಮನೆಗೆ ಬರುತ್ತಿದ್ದೆ ಎಂಬುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ.3: ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ರಿಕ್ಷಾ ಚಾಲಕ ರಿಕ್ಷಾವನ್ನು ವೇಗವಾಗಿ ಚಲಾಯಿಸಿಕೊಂಡು ಬರುತ್ತಿದ್ದು ಆಟೋ ತೂಗುಸೇತುವೆ ಹತ್ತಿರ ಬರುತ್ತಿದ್ದಾಗ ರಸ್ತೆಯಲ್ಲಿ ಒಂದು ಮಗು ಅಡ್ಡ ಬಂದಿದ್ದು, ತಕ್ಷಣ ಆರೋಪಿ ಆಟೋಗೆ ಬ್ರೇಕ್ ಹಾಕಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ4: ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಬ್ರೇಕ್ ಹಾಕಿದ್ದರಿಂದ ಆಟೋ ಪಲ್ಟಿ ಆಗಿದ್ದು, ರಿಕ್ಷಾ ಪಲ್ಟಿಯಾದ್ದರಿಂದ ತಾನು ಆಚೆ ಬಿದ್ದೆ, ಮಗು ಆಟೋದೊಳಗೆ ಇದ್ದು ಆಟೋ ಪಲ್ಟಿಯಾಗಿದ್ದರಿಂದ ಆತನ ಕಿವಿ ಮತ್ತು ಬಾಯಿಯಿಂದ ರಕ್ತ ಬರುತ್ತಿದ್ದು, ಆಗ ಸಮಯ 12-00 ರಿಂದ 12-30 ಆಗಿತ್ತು ಎಂಬುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ5: ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಅಂಬುಲನ್ಸ ಮೂಲಕ ಮಗುವನ್ನು ಸೆಂಟ್ ಇಗ್ನೇಶಿಯಸ್ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದು, ಪರೀಕ್ಷಿಸಿದ ವೈದ್ಯರು ಮಗು ಈಗಾಗಲೇ ಮೃತಪಟ್ಟಿದೆ ಎಂದು ಹೇಳಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ6: ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಮಗು ಮೃತಪಟ್ಟಿದ್ದರಿಂದ ತಾನು ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿದ್ದು, ರಿಕ್ಷಾ ಚಾಲಕ ಆಟೋಗೆ ಬ್ರೇಕ್ ಹಾಕಿದ್ದರಿಂದ ಆಟೋ ಪಲ್ಟಿಯಾಗಿದ್ದ ಕಾರಣಕ್ಕೆ ಅಪಘಾತ ಆಗಿದ್ದು ರಿಕ್ಷಾ ಚಾಲಕನ ತಪ್ಪಿನಿಂದಲೇ ಸದರಿ ಅಪಘಾತವಾಗಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ7: ಫ್ರಾಸಾ-2 ದಾವುದ್ ಖಾನ್ ಅಬ್ದುಲ್ ರೆಹಮಾನ್ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 28-12-2024 ರಂದು ಹೊನ್ನಾವರ ಗೇರುಸೊಪ್ಪಾ ರಸ್ತೆಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಉಪ್ಪೋಣಿ ಬ್ರಿಡ್ಜ ಹತ್ತಿರ ಒಂದು ಆಟೋ ಅಪಘಾತವಾಗಿದ್ದು ಸದರಿ ಅಪಘಾತದ ವಿಚಾರವಾಗಿ ಪೋಲೀಸರು ದಿನಾಂಕ 03-01-2025 ರಂದು ಸಂಜೆ 05-30 ರ ಸಮಯದಲ್ಲಿ ಪಂಚನಾಮೆ ಮಾಡಲು ಬಂದಿದ್ದು ಚಾಸಾ-7 ರವರು ತೋರಿಸಿದ ಅಪಘಾತ ಸ್ಥಳದಲ್ಲಿ ಪೋಲೀಸರು ಸ್ಥಳ ಪಂಚನಾಮೆ ಮಾಡಿ, ಒಂದು ಕಚ್ಚಾ ನಕಾಶೆ ತಯಾರಿಸಿ, ಸದರಿ ಸ್ಥಳದಲ್ಲಿ ಇದ್ದ ಆಟೋದ ಬಳಿ ನಿಲ್ಲಿಸಿ ಸುಮಾರು 5 ಫೋಟೋಗಳನ್ನು ತೆಗೆದಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ8: ಫ್ರಾಸಾ-3 ಮಹ್ಮದ್ ಯಾಸಿನ್ ತಂದೆ ಜಕ್ರಿಯಾ ಶೇಖ್ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 28-12-2024 ರಂದು ಮಧ್ಯಾಹ್ನ 12-00 ರಿಂದ 01-00 ಗಂಟೆ ಸಮಯದಲ್ಲಿ ಉಪ್ಪೋಣಿಯ

ತೂಗುಸೇತುವೆಯ ಹತ್ತಿರದ ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿ ನಿಂತುಕೊಂಡಿದ್ದಾಗ ಅದೇ ವೇಳೆಗೆ ಆರೋಪಿ ಹೊನ್ನಾವರದಿಂದ ಗೇರುಸೊಪ್ಪ ಕಡೆಗೆ ಆಟೋ ಚಲಾಯಿಸಿಕೊಂಡು ಬರುತ್ತಿದ್ದನು ಎಂಬುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ9: ಫ್ರಾಸಾ–3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ಉಪ್ಪೋಣಿ ಬ್ರಿಡ್ಜ ಹತ್ತಿರದ ರಾಷ್ಟ್ರೀಯ ಹೆದ್ದಾರಿಯಲ್ಲಿ ಒಂದು ಸಣ್ಣಮಗು ರಸ್ತೆಗೆ ಅಡ್ಡಬಂದಿದ್ದರಿಂದ ಆರೋಪಿ ಆಟೋಗೆ ಬ್ರೇಕ್ ಹಾಕಿದ್ದು, ತಕ್ಷಣ ಆಟೋ ಪಲ್ಟಿಯಾಯಿತು ಎಂಬುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ10: ಫ್ರಾಸಾ–3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ತಕ್ಷಣ ತಾನು ಮತ್ತು ಸ್ಥಳದಲ್ಲಿದ್ದವರು ಆಟೋ ಎತ್ತಿ ನೋಡಲಾಗಿ ಆಟೋದಲ್ಲಿ ಪ್ರಯಾಣಿಸುತ್ತಿದ್ದವರ ಪೈಕಿ ಒಂದು ಮಗು ಇದ್ದು ಪಲ್ಟಿಯಾಗಿದ್ದ ಆಟೋ ಆ ಮಗುವಿನ ಮೇಲೆ ಬಿದ್ದಿತ್ತು, ಆಟೋವನ್ನು ಎತ್ತಿ ಮಗುವನ್ನು ಎತ್ತಿ ನೋಡಲಾಗಿ ಮಗುವಿಗೆ ಕಿವಿಯ ಹತ್ತಿರ, ಹಣೆಯ ಮೇಲೆ ಮತ್ತು ಮೈಮೇಲೆ ಗಾಯವಾಗಿದ್ದವು ಎಂಬುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ11: ಫ್ರಾಸಾ–3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಆ ಮಗುವನ್ನು ಆಟೋದಲ್ಲಿದ್ದವರ ಜೊತೆಯಲ್ಲಿ ಆಸ್ಪತ್ರೆಗೆ ಕಳುಹಿಸಿದ್ದು, ತದನಂತರ ಆ ಮಗು ಮೃತಪಟ್ಟಿರುವುದಾಗಿ ಗೊತ್ತಾಯಿತು ಎಂಬುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ12: ಫ್ರಾಸಾ–3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆಟೋ ಚಾಲಕ ಆಟೋವನ್ನು ವೇಗವಾಗಿ ಚಲಾಯಿಸಿಕೊಂಡು ಬರುತ್ತಿದ್ದು ಮಗು ಅಡ್ಡ ಬಂದಾಗ ಬ್ರೇಕ್ ಹಾಕಿದ್ದರಿಂದ ಅಪಘಾತವಾಗಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ13: ಫ್ರಾಸಾ–3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 03–01–2025 ರಂದು ಸಂಜೆ 05–30 ರ ಸಮಯದಲ್ಲಿ ಸದರಿ ಅಪಘಾತ ಸ್ಥಳಕ್ಕೆ ಪೋಲೀಸರು ಬಂದಿದ್ದು ತಾನು ತೋರಿಸಿದ ಅಪಘಾತ ಸ್ಥಳದಲ್ಲಿ ಪೋಲೀಸರು ಚಾಸಾ–2 ಮತ್ತು 3 ರವರ ಸಮಕ್ಷಮ ಸ್ಥಳ ಪಂಚನಾಮೆ ಮಾಡಿ, ಒಂದು ಕಚ್ಚಾ ನಕಾಶೆ ತಯಾರಿಸಿ, ಸದರಿ ಸ್ಥಳದಲ್ಲಿ ಇದ್ದ ಆಟೋದ ಬಳಿ ನಿಲ್ಲಿಸಿ ಸುಮಾರು 5 ಫೋಟೋಗಳನ್ನು ತೆಗೆದಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ14: ಫ್ರಾಸಾ–4 ಹೊನ್ನಾವರ ಪೊಲೀಸ್ ಠಾಣೆಯ ಆರಕ್ಷಕ ಉಪ–ನಿರೀಕ್ಷಕರಾದ ಮಂಜುನಾಥ ತಿಮ್ಮ ರೆಡ್ಡಪ್ಪ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 28–12–2024 ರಂದು ತಾನು ಠಾಣಾ ಪ್ರಭಾರದಲ್ಲಿದ್ದಾಗ ಮಧ್ಯಾಹ್ನ 03–15 ಗಂಟೆಗೆ ಪಿರ್ಯಾದುದಾರರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಪಡೆದುಕೊಂಡು ಠಾಣಾ ಮೊಕದ್ದಮೆ ನಂ.286/2024 ರಂತೆ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡು ನಂತರ ಕೇಸಿನ ಕಡತವನ್ನು ಚಾಸಾ–17 ರವರಿಗೆ ವಹಿಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ15: ಫ್ರಾಸಾ–5 ಹೊನ್ನಾವರ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರಾದ ಶ್ರೀ ಸಿದ್ದರಾಮೇಶ್ವರ ಲೇಟ್ ಶಂಬಣ್ಣ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 17–01–2025 ರಂದು ಕೇಸಿನ ಕಡತವನ್ನು ಚಾಸಾ–17 ರಿಂದ ಪಡೆದುಕೊಂಡು ದಿನಾಂಕ 22–01–2025 ರಂದು ಆರೋಪಿ ಚಾಲಕನಿಗೆ ಕಲಂ 35BNSS ರಡಿಯಲ್ಲಿ ನೋಟೀಸು ನೀಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ16: ಫ್ರಾಸಾ–5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 23–01–2025 ರಂದು ಆಟೋ ರಿಕ್ಷಾ ಸಂಖ್ಯೆಃ ಕೆಎ–47 ಎ/3826 ರ ಮಾಲೀಕರಾದ ಚಾಸಾ–8 ರವರಿಗೆ ಕಲಂ 133 ರಡಿಯಲ್ಲಿ ನೋಟೀಸು ನೀಡಿ ಉತ್ತರ ಪಡೆದುಕೊಂಡು ಅದೇ ದಿನ ವಾಹನದ ಮಾಲೀಕರು ಆಟೋದ ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಪಡೆದು ಕಡತಕ್ಕೆ ಅಳವಡಿಸಿ, ಆಟೋ ಮಾಲೀಕರಿಂದ ಇಂಡೆಮ್ನಿಟಿ ಬಾಂಡ್ ಪಡೆದು ಆಟೋವನ್ನು ಅವರ ಸ್ವಾದೀನಕ್ಕೆ ನೀಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ 17: ಫ್ರಾಸಾ–5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅದೇ ದಿನ ಆರೋಪಿ ಚಾಲಕ ತಾನೇ ಸ್ವತಃ ಠಾಣೆಗೆ ಹಾಜರಾದ್ದರಿಂದ ಆತನನ್ನು ಬಂಧಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 18: ಫ್ರಾಸಾ–5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 18–03–2025 ರಂದು ಮೃತನ ಪಿಎಂ ವರದಿಯನ್ನು ಹೊನ್ನಾವರ ಸರಕಾರಿ ಆಸ್ಪತ್ರೆಯಿಂದ ಪಡೆದಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 19: ಫ್ರಾಸಾ–5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 20–03–2025 ರಂದು ಆರೋಪಿ ಮತ್ತು ಗಾಯಾಳುವಿನ ಎರಡು ಗಾಯದ ಪ್ರಮಾಣಪತ್ರಗಳನ್ನು ಪಡೆದಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 20: ಫ್ರಾಸಾ–5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 30–03–2025 ರಂದು ಐಎಂವಿ ವರದಿಯನ್ನು ಹಾಗೂ ಮೃತನ ಸಾವಿನ ಕಾರಣದ ಅಂತಿಮ ಅಭಿಪ್ರಾಯವನ್ನು ಆಸ್ಪತ್ರೆಯಿಂದ ಪಡೆದು ತನಿಖೆ ಪೂರೈಸಿ ಆರೋಪಿ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ 21: ಫ್ರಾಸಾ–5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ತಾನು ಬಂಧಿಸಿದ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ ಎಂಬುದಾಗಿ ಹೇಳಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ22: ಫ್ರಾಸಾ–6 ಕುಮಟಾ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರಾದ ಶ್ರೀ ಕೆ.ಎಂ. ಯೋಗೀಶ್ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 28–12–2024 ರಂದು ಕೇಸಿನ ಕಡತವನ್ನು ಚಾಸಾ–14 ರವರಿಂದ ಪಡೆದುಕೊಂಡು ಅದೇ ದಿನ ಮೃತನ ಶವ ಪರೀಕ್ಷಾ ವರದಿ ತಯಾರಿಸಿಕೊಂಡು ಬರುವಂತೆ ಚಾಸಾ–16 ರವರಿಗೆ ಜ್ಞಾಪನ ನೀಡಿದ್ದು, ಅದರಂತೆ ಚಾಸಾ–16 ರವರು ಸರಕಾರಿ ಆಸ್ಪತ್ರೆಗೆ ಭೇಟಿ ನೀಡಿ ಪಂಚರ ಸಮಕ್ಷಮ ಶವತನಿಖಾ ವರದಿಯನ್ನು ತಯಾರಿಸಿ ಚಾಸಾ–6 ರವರ ಹೇಳಿಕೆಯನ್ನು ಹಾಗೂ ವೈದ್ಯಕೀಯ ಪರೀಕ್ಷೆಯ ನಂತರ ಶವವನ್ನು ಮೃತನ ವಾರಸುದಾರರಿಗೆ ಹಸ್ತಾಂತರಿಸಿದ ಬಗ್ಗೆ ರಸೀದಿಯನ್ನು ತಂದು ಹಾಜರುಪಡಿಸಿದ್ದು ಅದನ್ನು ಪಡೆದು ಕಡತಕ್ಕೆ ಅಳವಡಿಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ23: ಫ್ರಾಸಾ–6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅದೇ ದಿನ ಶವ ಪಂಚನಾಮೆಯ ಕಾಲಕ್ಕೆ ಫೋಟೋಗಳನ್ನು ತೆಗೆದು ಅದನ್ನು ಸಿಡಿಯಲ್ಲಿ ಹಾಕಿ ಹಾಜರುಪಡಿಸಿದ ಬಗ್ಗೆ ಚಾಸಾ–16 ರವರು ವರದಿ ನೀಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ24: ಫ್ರಾಸಾ–6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 01–01–2025 ರಂದು ಚಾಸಾ–15 ರವರಿಗೆ ಘಟನಾ ಸ್ಥಳದ ಪಂಚನಾಮೆ ಮತ್ತು ವಾಹನಗಳನ್ನು ಅಮಾನತ್ತುಪಡಿಸಿಕೊಂಡು ಬರಲು ಜ್ಞಾಪನ ನೀಡಿದ್ದು, ಅದರಂತೆ ಚಾಸಾ–15 ರವರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಸ್ಥಳ ಪಂಚನಾಮೆ ಮತ್ತು ಕಚ್ಚಾ ನಕಾಶೆಯನ್ನು ತಯಾರಿಸಿ, ಫೋಟೋ ತೆಗೆಸಿ ಅವುಗಳನ್ನು ತಂದು ತನ್ನ ಮುಂದೆ ಹಾಜರುಪಡಿಸಿದ್ದು ಅವುಗಳನ್ನು ಪಡೆದು ಕಡತಕ್ಕೆ ಅಳವಡಿಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ25: ಫ್ರಾಸಾ–6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆ ಕಾಲಕ್ಕೆ ಚಾಸಾ–7 ರವರ ಹೇಳಿಕೆಯನ್ನು ಹಾಗೂ ಶವ ಪಂಚನಾಮೆಯ ಕಾಲಕ್ಕೆ ತೆಗೆದಿದ್ದ ಫೋಟೋಗಳ ಡಿವಿಡಿಯನ್ನು ಹಾಜರುಪಡಿಸಿದ್ದು ಅದನ್ನು ಪಡೆದು ಕಡತಕ್ಕೆ ಅಳವಡಿಸಿ ದಿನಾಂಕ 17–01–2025 ರಂದು ಕೇಸಿನ ಕಡತವನ್ನು ಚಾಸಾ–18 ರವರಿಗೆ ವಹಿಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ26: ಫ್ರಾಸಾ–7 ಹೊನ್ನಾವರ ಸಂಚಾರ ಪಿ.ಎಸ್.ಐ. ಆಗಿರುವ ಮಮತಾ ಶಂಕರ ನಾಯ್ಕ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 01–01–2025 ರಂದು ಚಾಸಾ–18ರವರು ಈ ಪ್ರಕರಣದಲ್ಲಿ ಸ್ಥಳ ಪಂಚನಾಮೆ ಕೈಗೊಂಡು ಸಾಕ್ಷಿದಾರರ ಹೇಳಿಕೆಯನ್ನು ದಾಖಲಿಸುವಂತೆ ಜ್ಞಾಪನ ನೀಡಿದ್ದು, ಅದರಂತೆ ದಿನಾಂಕ 03–01–2025ರಂದು ಸಂಜೆ 05–30 ರಿಂದ 07–00 ಗಂಟೆ ಸಮಯದಲ್ಲಿ ಘಟನಾ ಸ್ಥಳಕ್ಕೆ ಭೇಟಿ ನೀಡಿ ಅಪಘಾತದ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ–7ರವರು ತೋರಿಸಿದ ಸ್ಥಳದಲ್ಲಿ ಚಾಸಾ–2 ಮತ್ತು 3ರವರ ಸಮಕ್ಷಮ ಸ್ಥಳ ಪಂಚನಾಮೆ ಮತ್ತು ಕಚ್ಚಾ ನಕಾಶೆಯನ್ನು ತಯಾರಿಸಿ, ಪಂಚನಾಮೆಯ ಕಾಲಕ್ಕೆ ಅಪಘಾತಪಡಿಸಿದ ಆಟೋ ಸ್ಥಳದಲ್ಲೇ ಇದ್ದು ಅದನ್ನು ಅಮಾನತ್ತುಪಡಿಸಿಕೊಂಡು ಫೋಟೋ ತೆಗೆಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ27: ಫ್ರಾಸಾ–7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅದೇ ದಿನ ಚಾಸಾ–7ರವರ ಹೇಳಿಕೆ ಪಡೆದು, ಪಂಚನಾಮೆ, ಕಚ್ಚಾ ನಕಾಶೆ, ಫೋಟೋ ಹಾಗೂ ಚಾಸಾ–7ರವರ ಹೇಳಿಕೆಗಳನ್ನು ಠಾಣಾಧಿಕಾರಿಯವರಿಗೆ ನೀಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ? ಇದಕ್ಕೆ ನಿವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ28: ನೀವು ಹೇಳುವುದಾದರು ಏನು ಇದೆಯೇ?
ಉತ್ತರಃ

ಪ್ರಶ್ನೆ 29: ನಿಮ್ಮ ಪರವಾಗಿ ಯಾವುದಾದರೂ ಮೌಖಿಕ ಅಥವಾ ದಾಖಲಾತಿ ಸಾಕ್ಷ್ಯ ಇರುತ್ತದೆಯೇ?

ಉತ್ತರಃ

(ಆರೋಪಿಯ ಹೇಳಿಕೆಯನ್ನ ಆರೋಪಿಗೆ ಗೊತ್ತಿರುವ ಭಾಷೆಯಲ್ಲಿ ಓದಿ ವಿವರಿಸಿ ಹೇಳಲಾಯಿತು. ಆತ ಹೇಳಿದ ಉತ್ತರಗಳನ್ನು ನನ್ನ ಸ್ವಹಸ್ತಾಕ್ಷರದಿಂದ ಬರೆದು ಕೊಂಡಿರುತ್ತೇನೆ.)

ಸಹಿ ಇದೆ.

**ಸ್ಥಳಃ ಹೊನ್ನಾವರ** | **ಹಿರಿಯ ಶ್ರೇಣಿ ದೀವಣಿ ನ್ಯಾಯಾಧೀಶರು ಮತ್ತು**
**ದಿನಾಂಕಃ 26-03-2025** | **ಪ್ರ.ದ.ನ್ಯಾ ದಂಡಾಧಿಕಾರಿಗಳು, ಹೊನ್ನಾವರ**